ಮಾಗಡಿ ಕ್ಷೇತ್ರದಲ್ಲಿ ವೃತ್ತಿ ಶಿಕ್ಷಣ ಕಾಲೇಜು ಆರಂಭಿಸುವುದು

1008 (1491)

ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯಗಳು ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿ ಇಲಾಖೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಮಾಗಡಿ ಕ್ಷೇತ್ರದಲ್ಲಿ ವೃತ್ತಿ ಶಿಕ್ಷಣ ಕಾಲೇಜನ್ನು ಆರಂಭಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ಇದಕ್ಕೆ ಯಾವಾಗ ಮಂಜೂರಾತಿ ಆರಂಭಿಸಲಾಗುವುದು? ಇದರಲ್ಲಿ ಆರಂಭಿಸುವ ಕೋರ್ಸ್‌ಗಳ ಬಗ್ಗೆ ಪ್ರತ್ಯೇಕ ಮಾಹಿತಿ ನೀಡುವುದು ?

ಆ) ಮಾಗಡಿಯಲ್ಲಿ ವೃತ್ತಿ ಶಿಕ್ಷಣ ಕಾಲೇಜು ಇಲ್ಲದೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಭಾರಿ ತೊಂದರೆಯಾಗಿರುವುದರಿಂದ ಈ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ವೃತ್ತಿ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯಗಳು ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿ ಇಲಾಖೆಗಳ ರಾಜ್ಯ ಸಚಿವರು) :

ಅ) ಸಧ್ಯಕ್ಕೆ ಹೊಸದಾಗಿ ವೃತ್ತಿ ಶಿಕ್ಷಣ ಕೋರ್ಸುಗಳನ್ನು ಮಂಜೂರು ಮಾಡುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ. ಆದರೆ ಈಗಾಗಲೇ ಮಾಗಡಿ ಕ್ಷೇತ್ರದಲ್ಲಿ 12 ಹಂತದ 14 ವೃತ್ತಿ ಶಿಕ್ಷಣ ಕೋರ್ಸುಗಳನ್ನು 7 ವಿದ್ಯಾಲಯಗಳಲ್ಲಿ ಮಂಜೂರು ಮಾಡಲಾಗಿದೆ. ಅದರ ವಿವರ ಈ ರೀತಿ ಇದೆ:

ಕ್ರಮ ಸಂಖ್ಯೆ	ಕಾಲೇಜುಗಳ ಹೆಸರು	ಕೋರ್ಸುಗಳ ಹೆಸರು
1.	ಸಿದ್ಧಗಂಗಾ ಪ. ಪೂ. ಕಾ. ಗುಡೇಮಾರನ ಹಳ್ಳಿ	1. ರೇಷ್ಮೆ ಕೃಷಿ 2. ಹೊಲಿಗೆ ಮತ್ತು ಕಸೂತಿ
2.	ಹೆಚ್. ಜಿ. ಚನ್ನಪ್ಪ ಪ.ಪೂ.ಕಾ. ಹುಲೀಕಟ್ಟೆ	1. ಲ್ಯಾಬ್ ಟೆಕ್ನೀಷಿಯನ್
3.	ಸ.ಪ.ಪೂ.ಕಾ. ಕುದೂರು	1. ಎಲೆಕ್ಟ್ರಿಕಲ್ ವೈರಿಂಗ್ 2. ರೇಷ್ಮೆ ಕೃಷಿ
4.	ಸ.ಪ.ಪೂ.ಕಾ. ತಿಪ್ಪಸಂದ್ರ	1. ರೇಷ್ಮೆ ಕೃಷಿ
5.	ಸ.ಪ.ಪೂ.ಕಾ. ಮಾಗಡಿ	1. ರೇಷ್ಮೆ ಕೃಷಿ 2. ಬೇಸಿಕ್ ಹೆಲ್ತ್ ವರ್ಕರ್ 3. ಪ್ರೀ ಸ್ಕೂಲ್ ಎಜುಕೇಷನ್

6.	ಆಲ್ ಅಲ್‌ಫಲ್ ಪ.ಪೂ.ಕಾ. ಮಾಗಡಿ	1. ರೇಷ್ಮೆ ಕೃಷಿ
		2. ಬ್ಯಾಂಕಿಂಗ್
		3. ಲ್ಯಾಬ್ ಟೆಕ್ನಿಷಿಯನ್
		4. ಎಲೆಕ್ಟ್ರಿಕಲ್ ವೈರಿಂಗ್
7.	ಶುಕಪುರಿ ಪ.ಪೂ.ಕಾ. ಸುಗ್ಗನಹಳ್ಳಿ	1. ಸರ್ವೇಯಿಂಗ್

ಆ) ಕೇಂದ್ರ ಸರ್ಕಾರವು ಅನುದಾನ ನೀಡುವುದನ್ನು ನಿಲ್ಲಿಸಿರುವುದರಿಂದ ಸಧ್ಯದಲ್ಲಿ ಹೊಸ ವೃತ್ತಿ ಶಿಕ್ಷಣ ಕೋರ್ಸು ಕಾಲೇಜುಗಳನ್ನು ಮಂಜೂರು ಮಾಡಲು ಸಾಧ್ಯವಿಲ್ಲ

ಉದ್ಯೋಗ ಭರವಸೆಯಡಿ ಕೊಡಗು ಜಿಲ್ಲೆಗೆ ನೀಡಲಾದ ಹಣ

1009 (1182)

ಶ್ರೀ ಹೆಚ್. ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1996-97, 97-98 ಹಾಗೂ 98-99 ಸಾಲುಗಳಲ್ಲಿ ಕೊಡಗು ಜಿಲ್ಲೆಗೆ ಉದ್ಯೋಗ ಭರವಸೆ ಯೋಜನೆಯಡಿ ಒದಗಿಸಲಾದ ಹಣವೆಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

ಆ) 1996-97, 97-98 ಹಾಗೂ 98-99ರ ಸಾಲುಗಳಲ್ಲಿ ಕೊಡಗು ಜಿಲ್ಲೆಗೆ ಶೌಚಾಲಯಕ್ಕಾಗಿ ಬಿಡುಗಡೆ ಮಾಡಲಾದ ಹಣವೆಷ್ಟು ಮತ್ತು ವೆಚ್ಚ ಮಾಡಲಾದ ಹಣವೆಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ಅನುಬಂಧದಲ್ಲಿ ನಮೂದಿಸಲಾಗಿದೆ.

ಆ) ಅನುಬಂಧದಲ್ಲಿ ನಮೂದಿಸಲಾಗಿದೆ.